ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ
ನ್ಯಾಯಾಲಯ ಮೂಡಬಿದಿರೆ

ಸಿಸಿ ನಂ.416/2023 ,
ಚಾಸಾ- 3, ಪ್ರಾಸಾ -3

| | |
|---|---|
| ಹೆಸರು | ಅಪೂರ್ವಾ |
| ಗಂಡನ ಹೆಸರು | ವಿಶ್ವಜಿತ್ |
| ವಯಸ್ಸು | 28 ವರ್ಷ |
| ಕೆಲಸ | ಗ್ರಾಮ ಲೆಕ್ಕಾಧಿಕಾರಿ |
| ವಾಸ | ಕಾರ್ಕಳ |
| ಪ್ರಮಾಣೀಕರಿಸಿದ ದಿನಾಂಕ | 30-07-2024 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ನಾನು ಸೆಪ್ಟೆಂಬರ್ -2022 ರಿಂದ ಫೆಬ್ರವರಿ 2023 ವರೆಗೆ ಮೂಡಬಿದ್ರೆಯ ಹೊಸಬೆಟ್ಟು ಗ್ರಾಮ ಪಂಚಾಯಿತಿಯಲ್ಲಿ ಗ್ರಾಮ ಲೆಕ್ಕಾಧಕಾರಿಯಾಗಿ ಕರ್ತವ್ಯ ನಿವರ್ಹಿಸಿದ್ದೆ.

ಚಾಸಾ-1 ,ಚಾಸಾ-2 ಮತ್ತು ಚಾಸಾ-4 ಗೊತ್ತು . ನ್ಯಾಯಾಲಯದ ಮುಂದೆ ಇರುವ 2ನೇ ಆರೋಪಿತರು 1 ಮತ್ತು 3ನೇ ಅರೋಪಿತರು ಗೊತ್ತು , ಅವರನ್ನು ನೋಡಿದರೆ ಗುರುತಿಸಬಲ್ಲೆನು ಅವರು ಈ ದಿನ ಗೈರುಹಾಜರಾಗಿರುತ್ತಾರೆ . ತಹಶೀಲ್ದಾರ್ ರವರು ಹೊಸಬೆಟ್ಟು ಗ್ರಾಮ ಸರ್ವೇ ನಂ. 198 ರಲ್ಲಿ ಸರ್ಕಾರಿ ಜಾಗವನ್ನು ಅಳತೆ ಮಾಡಲು ಆದೇಶವನ್ನು ನೀಡಿದ್ದು , ಅದರಂತೆ ದಿಃ 06-10-2022 ರಂದು ಸುಮಾರು 11-00 ಗಂಟೆಯ ಸಮಯದಲ್ಲಿ ಸದರಿ ಸ್ಥಳಕ್ಕೆ ಹೋದಾಗ , ಸ್ಥಳದಲ್ಲಿ ಸರ್ವೇ ಮಾಡಲು ಆರೋಪಿತರು ಬಿಟ್ಟಿರುವುದಿಲ್ಲ .

ಅದರಲ್ಲಿ ಯಾರೋ ಒಬ್ಬರು ಕತ್ತಿಯನ್ನು ಹಿಡಿದುಕೊಂಡು ನಿಂತಿದ್ದರು . ಇನ್ನೊಬ್ಬರು ಕಲ್ಲನ್ನುಹಿಡಿದುಕೊಂಡು ಅವರ ತಲೆಗೆ ಹೊಡೆದುಕೊಂಡು , ನನಗೆ ಹೊಡೆದಿರುತ್ತಾರೆ , ನಾನು ದೂರು ದಾಖಲು ಮಾಡುತ್ತೇನೆ ಎಂದು ಹೇಳುತ್ತಿದ್ದರು . ನಂತರ  ಅಳತೆ ಮಾಡಲು ಬಿಟ್ಟಿರುವುದಿಲ್ಲ. ಚಾಸಾ-1 ರವರು ಸದರಿ ಕತ್ತಿಯನ್ನು ಅವರಿಂದ ತೆಗೆದುಕೊಂಡು ದೂರು ದಾಖಲು ಮಾಡಲು ಬಂದಿರುತ್ತಾರೆ .  ಸದರಿ ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ . ಸಾಕ್ಷಿ ನಿಪಿ-1 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು . ದೂರು ದಾಖಲಿಸುವ ಮುಂಚೆ  ಅಲ್ಲಿ ನಡೆದ ವಿಚಾರವನ್ನು ತಹಶೀಲ್ದಾರ್ ರವರಿಗೆ ಹೇಳಿರುತ್ತೇವೆ .

ಪಾಟೀಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ  ಎಸ್.ಎಸ್.ಡಿ ರವರಿಂದಃ

1. ನನಗೆ ಫೋನ್ ಮುಖಾಂತರ  ಅಳತೆ ಮಾಡುವ ಸ್ಥಳಕ್ಕೆ ಬರಲು ತಿಳಿಸಿರುತ್ತಾರೆ . ಸುಮಾರು 11-00 ಗಂಟೆಯಲ್ಲಿ ಗ್ರಾಮ ಸಹಾಯಕರಿಗೆ ಫೋನ್ ಕರೆ ಬಂದಿರುತ್ತದೆ . ಸದರಿ ಫೋನ ಕರೆ ಬಂದಾಗ ನಾವು ಯಾವ ಜಾಗದಲ್ಲಿ ಇದ್ದೆವು ಎಂದು ಗೊತ್ತಿಲ್ಲ . ನಾವು ಅಳತೆ ಮಾಡುವ ಸ್ಥಳಕ್ಕೆ ಹೋದಾಗ ಅಲ್ಲಿ  ಒಬ್ಬನ ಕೈಯಲ್ಲಿ ಕತ್ತಿ ಇತ್ತು , ಅದು ಯಾರೆಂದು ನನಗೆ ಗೊತ್ತಿಲ್ಲ. ಸದರಿ ಕತ್ತಿಯನ್ನು ಚಾಸಾ-1 ರವರು ತೆಗೆದುಕೊಂಡಿರುತ್ತಾರೆ , ನಂತರ ಅದನ್ನು ಅವರ ಕಚೇರಿಗೆ ತೆಗೆದುಕೊಂಡು ಹೋಗಿರುತ್ತಾರೆ . ಸದರಿ ವಿಚಾರವನ್ನು ನಾನು ಪೊಲೀಸರಿಗೆ ಹೇಳಿರುತ್ತೇನೆ . ಅಳತೆ ಮಾಡುವ ಸಮಯದಲ್ಲಿ ಏನೆಲ್ಲಾ ನಡೆದಿದೆ ಎನ್ನುವ ಬಗ್ಗೆ ಈಗ ನೆನಪಿಲ್ಲ . ನಮ್ಮ ವಿ.ಎ ಕಚೇರಿಗೆ ಪೊಲೀಸರು ಮಾರನೆ ದಿನ ಸುಮಾರು ಬೆಳಿಗ್ಗೆ 10-11 ಗಂಟೆಗೆ ಬಂದಿರುತ್ತಾರೆ . ಆಗ ಬಂದ ಪೊಲೀಸರು ನಾನು ಹೇಳಿದ ವಿಚಾರವನ್ನು ಕೈಯಲ್ಲಿ ಬರೆದುಕೊಂಡು

ಹೋಗಿರುತ್ತಾರೆ . ಸದರಿ ಹೇಳಿಕೆಯನ್ನು ಹೊರತು ಪಡಿಸಿ ಬೇರೆ ಯಾವುದೇ ಹೇಳಿಕೆಯನ್ನು ನಾನು ನೀಡಿರುವುದಿಲ್ಲ . ಚಾಸಾ-1 ರವರ ಸುಳ್ಳು ಪ್ರಕರಣಕ್ಕೆ ನಾನು ಸುಳ್ಳು ಸಾಕ್ಷಿ ನ ಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ   ಹೇಳಿ  ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ